# ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ರೋಣ

**ಉಪಸ್ಥಿತರುಃ–ಶ್ರೀ. ವಿಜಯಕುಮಾರ್ ಎನ್,** ಬಿ.ಎ., ಎಲ್‌ಎಲ್.ಬಿ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ರೋಣ.

**ದಿನಾಂಕ 03 ನೇ ಜೂನ್ ಮಾಹೆಯ 2026 ನೇ ಇಸವಿ**

**ಎಫ್.ಡಿ.ಪಿ. ಸಂಖ್ಯೆ 09/2025**

ವಾದಿ – **ಹನಮವ್ವ ಗಂಡ ಬಸವರಾಜ ಹುಗ್ಗಿ,**
ವಯಾಃ 40 ವರ್ಷ, ಉಃ ಮನೆಕೆಲಸ,
ಸಾಃ ಕಾತರಕಿ, ತಾಃ ಬದಾಮಿ, ಜಿಃ ಬಾಗಲಕೋಟ.

**(ವಾದಿ ಪರ ಶ್ರೀ. ಎಸ್.ಬಿ.ಕೆ., ವಕೀಲರು)**

ವಿರುದ್ಧ

ಪ್ರತಿವಾದಿಗಳು – 1) **ಮಲ್ಲಪ್ಪ ತಂದೆ ನಿಂಗಪ್ಪ ಹುಗ್ಗಿ,**
ವಯಾಃ 86 ವರ್ಷ, ಉಃ ಶೇತ್ಕಿ,
ಸಾಃ ಮಾಡಲಗೇರಿ, ತಾಃ ರೋಣ, ಜಿಃ ಗದಗ.

2) **ಬಸವ್ವ ಗಂಡ ಮಲ್ಲಪ್ಪ ಹುಗ್ಗಿ**
ವಯಾಃ 78 ವರ್ಷ, ಉಃ ಶೇತ್ಕಿ,
ಸಾಃ ಮಾಡಲಗೇರಿ, ತಾಃ ರೋಣ, ಜಿಃ ಗದಗ.

3) **ಶಿವಪ್ಪ ತಂದೆ ಮಲ್ಲಪ್ಪ ಹುಗ್ಗಿ,**
ವಯಾಃ 50 ವರ್ಷ, ಉಃ ಶೇತ್ಕಿ,
ಸಾಃ ಮಾಡಲಗೇರಿ, ತಾಃ ರೋಣ, ಜಿಃ ಗದಗ.

**(1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಎಂ.ಎಸ್.ಪಿ., ವಕೀಲರು)**
**(3 ನೇ ಪ್ರತಿವಾದಿಯ ಪರ ಶ್ರೀ ಎಸ್.ಎಂ.ಡಿ., ವಕೀಲರು)**

## ಆದೇಶ

ಪ್ರಸ್ತುತ ದಾವೆಯ ಅರ್ಜಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 20 ನಿಯಮ 18 ಸಹವಾಚಕ ಕಲಂ.54 ರಡಿಯಲ್ಲಿ ದಿನಾಂಕ 22.11.2024 ರಂದು ಮೇಲ್ಮನವಿ ಸಂಖ್ಯೆ 11/2022 ರಲ್ಲಿ ಆದಂತಹ ದಾವಾ ಆಸ್ತಿಯ ಸರ್ವೆನಂಬರ್ 35/1 ವಿಸ್ತೀರ್ಣ 4 ಎಕರೆ 05 ಗುಂಟೆಗಳ ಮತ್ತು ಸರ್ವೆನಂಬರ್ 36/1 ವಿಸ್ತೀರ್ಣ 4 ಎಕರೆ 24 ಗುಂಟೆಗಳ ಆಸ್ತಿಗೆ ಸಂಬಂಧಿಸಿದಂತೆ ಡಿಕ್ರಿಯ ಆಧಾರದ ಮೇಲೆ ಆಸ್ತಿಯನ್ನು ಹಂಚಿಕೆ ಮಾಡಿಕೊಡಬೇಕೆಂದು ಅಂತಿಮ ಡಿಕ್ರಿಯ ಪ್ರಕ್ರಿಯೆಯ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**ಪ್ರಸ್ತುತ ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ.**

**2.** ಅರ್ಜಿದಾರರು ದಾವಾ ಸಂಖ್ಯೆ 86/2013 ರಂತೆ ಘೋಷಣಾತ್ಮಕ ಪರಿಹಾರವನ್ನು ಕೋರಿ ದಾವೆಯನ್ನು ದಾಖಲು ಮಾಡಿದ್ದು, ಸದರಿ ದಾವೆಯಲ್ಲಿ ಆದಂತಹ ಡಿಕ್ರಿಯ ವಿರುದ್ಧ ಮೆಲ್ಮನವಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಸಂಖ್ಯೆ 11/2022 ರಲ್ಲಿ ದಿನಾಂಕ 22.11.2024 ರಂದು ಡಿಕ್ರಿಯಾಗಿರುತ್ತದೆ. ಸದರಿ ಡಿಕ್ರಿಯ ಆಧಾರದ ಮೇಲೆ ದಾವಾ ಆಸ್ತಿಗಳನ್ನು ಹಂಚಿಕೆ ಮಾಡಿಕೊಡಬೇಕೆಂದು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯ ಆಧಾರದ ಮೇಲೆ ನ್ಯಾಯಾಲಯವು ಎದುರುದಾರರಿಗೆ ದಾವಾ ಸಮನ್ಸ್ ಖುದ್ದು ಜಾರಿಯಾಗಿದ್ದು ಸದರಿ ಎದುರುದಾರರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ ಮತ್ತು ಎದುರುದಾರರ ಸದರಿ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ಪಕ್ಷಗಾರರ ಅರ್ಜಿಯ ಮೇರೆಗೆ ದಾವಾ ಆಸ್ತಿಗಳನ್ನು ಅಳತೆ ಮಾಡಲು ಆಯುಕ್ತರನ್ನು ನೇಮಕ ಮಾಡುವಂತೆ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕಲಂ 54 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ಆಧಾರದ ಮೇಲೆ ನ್ಯಾಯಾಲಯವು ಎ.ಡಿ.ಎಲ್.ಆರ್ ರೋಣ ರವರನ್ನು ಆಯುಕ್ತರನ್ನಾಗಿ ನೇಮಕಮಾಡಿರುತ್ತದೆ. ನಂತರ ಎ.ಡಿ.ಎಲ್.ಆರ್ ರೋಣ ಆಯುಕ್ತರು ಪಕ್ಷಗಾರರಿಗೆ ನೊಟೀಸ್ ನ್ನು ನೀಡಿದ್ದು, ಸದರಿ ನೊಟೀಸ್ ನ ಆಧಾರದ ಮೇಲೆ ಅರ್ಜಿದಾರರು

ಹಾಜರಾಗಿರುತ್ತಾರೆ. ಅವರ ಸಮಕ್ಷಮ ನ್ಯಾಯಾಲಯದ ಆದೇಶದ ಅನುಗುಣವಾಗಿ ಸರ್ವೇನಂಬರ 35/1 ವಿಸ್ತೀರ್ಣ 4 ಎಕರೆ 05 ಗುಂಟೆಗಳ ಮತ್ತು ಸರ್ವೆನಂಬರ್ 36/1 ವಿಸ್ತೀರ್ಣ 4 ಎಕರೆ 24 ಗುಂಟೆಗಳ ಆಸ್ತಿಯನ್ನು ಅಳತೆ ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ.

**3.** ಅರ್ಜಿದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿ ಇರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

**4.** ಆಯುಕ್ತರು ಸಲ್ಲಿಸಿದ ಸದರಿ ವರದಿಯಲ್ಲಿ ನಿವೇದನೆ, ನೊಟೀಸ್ ನ ಪ್ರತಿಗಳು, ಹೇಳಿಕೆ, ಅಂಚೆ ರಸೀದಿಗಳು ಮತ್ತು ಪಿ ಟಿ ಶೀಟ್ ನ್ನು ಹಾಜರುಮಾಡಿರುತ್ತಾರೆ. ಸದರಿ ದಾಖಲಾತಿಗಳನ್ನು ಅರ್ಜಿದಾರರು ಪಡೆದುಕೊಂಡು ಆಯುಕ್ತರು ಮಾಡಿದ ವರದಿಯ ಮೇಲೆ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಮತ್ತು ಪಿ ಟಿ ಶೀಟ್ ನಲ್ಲಿ ಅಳತೆ ಮಾಡಿ ತೋರಿಸಿರುವಂತೆ ಹಂಚಿಕೆ ಮಾಡಿಕೊಡಬೇಕೆಂದು ಹೇಳಿರುತ್ತಾರೆ. ಅದೇ ರೀತಿಯಾಗಿ ಸದರಿ ಆಯುಕ್ತರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ನೋಡಿದಾಗ ಆಯುಕ್ತರು ಅರ್ಜಿದಾರರಿಗೆ ಮತ್ತು ಎದುರುದಾರರಿಗೆ ದಾವಾ ಆಸ್ತಿಯಲ್ಲಿ ಸರಿಯಾಗಿ ಹಂಚಿಕೆ ಮಾಡಿರುತ್ತಾರೆ ಎನ್ನುವುದು ಸ್ಪಷ್ಟವಾಗಿ ತಿಳಿದು ಬಂದಿರುತ್ತದೆ. ಹಾಗಾಗೀ ಆಯು ಕ್ತರು ಹಾಜರುಮಾಡಿರುವ ಪಿ.ಟಿ.ಶೀಟ್ ನ್ನು ಡಿಕ್ರಿಯ ಒಂದು ಭಾಗವೆಂದು ಅಳವಡಿಸಿಕೊಳ್ಳಲಾಗಿದೆ ಮತ್ತು ನ್ಯಾಯಾಲಯದ ಆಯುಕ್ತರು ಸರ್ವೇನಂಬರ 35/1 ವಿಸ್ತೀರ್ಣ 4 ಎಕರೆ 05 ಗುಂಟೆಗಳ ಮತ್ತು ಸರ್ವೆನಂಬರ್ 36/1 ವಿಸ್ತೀರ್ಣ 4 ಎಕರೆ 24 ಗುಂಟೆಗಳ ಜಮೀನನ್ನು ಅಳತೆ ಮಾಡಿ ಸಲ್ಲಿಸಿದ ವರದಿಯನ್ನು ಯಥವತ್ತಾಗಿ ಅಳವಡಿಸಿಕೊಳ್ಳಲಾಗಿರುತ್ತದೆ. ಹಾಗಾಗೀ ಪ್ರಸ್ತುತ ಅಂತಿಮ ಡಿಕ್ರಿಯ ಪ್ರಕ್ರಿಯೆಯಲ್ಲಿ ಪಿ ಟಿ ಶೀಟ್ ನ್ನು ಡಿಕ್ರಿಯ ಒಂದು ಭಾಗವೆಂದು ಪರಿಗಣಿಸಿ ಸದರಿ ಪಿ ಟಿ ಶೀಟ್ ನ ಆಧಾರದ ಮೇಲೆ ಡಿಕ್ರಿಯನ್ನು ಮಾಡಿರುತ್ತೇನೆ.

## <u>ಆದೇಶ</u>

**ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸಲಾಗಿದೆ.**

**ಪಿ ಟಿ ಶೀಟಿನ ನಕಾಶೆಯಲ್ಲಿ ತೋರಿಸಿರುವಂತಹ ಸರ್ವೇ ನಂಬರ 35/1 ಮತ್ತು 36/1 ಜಮೀನುಗಳಲ್ಲಿ 1 ನೇ ಭಾಗವನ್ನು ಅರ್ಜಿದಾರರು ಪಡೆದುಕೊಳ್ಳಲು ಅರ್ಹರಿರುತ್ತಾರೆಂದು ಆದೇಶ ಮಾಡಲಾಗಿದೆ.**

**ಪಿ ಟಿ ಶೀಟಿನ ನಕಾಶೆಯಲ್ಲಿ ತೋರಿಸಿರುವಂತಹ ಸರ್ವೇ ನಂಬರ 35/1 ಮತ್ತು 36/1 ಜಮೀನುಗಳಲ್ಲಿ 2 ನೇ ಭಾಗವನ್ನು 1 ನೇ ಎದುರುದಾರರು ಪಡೆದುಕೊಳ್ಳಲು ಅರ್ಹರಿರುತ್ತಾರೆಂದು ಆದೇಶ ಮಾಡಲಾಗಿದೆ.**

**ಪಿ ಟಿ ಶೀಟಿನ ನಕಾಶೆಯಲ್ಲಿ ತೋರಿಸಿರುವಂತಹ ಸರ್ವೇ ನಂಬರ 35/1 ಮತ್ತು 36/1 ಜಮೀನುಗಳಲ್ಲಿ 3 ನೇ ಭಾಗವನ್ನು 3 ನೇ ಎದುರುದಾರರು ಪಡೆದುಕೊಳ್ಳಲು ಅರ್ಹರಿರುತ್ತಾರೆಂದು ಆದೇಶ ಮಾಡಲಾಗಿದೆ.**

**ಆಯುಕ್ತರು ನೀಡಿದ ಪಿ ಟಿ ಶೀಟ್ ನ್ನು ಡಿಕ್ರಿಯ ಒಂದು ಭಾಗವೆಂದು ಪರಿಗಣಿಸಲಾಗಿದೆ.**

**ತೀರ್ಪಿನಂತೆ ಅಂತಿಮ ಡಿಕ್ರಿಯನ್ನು ಬರೆಯಿರಿ.**

**ವೆಚ್ಚದ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.**

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ಮೇಲೆ ತಿದ್ದುಪಡಿಗಳನ್ನು ಪರಿಶೀಲಿಸಿ ದಿನಾಂಕ 03 ನೇ ಜೂನ್ 2026 ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಿದ್ದೇನೆ.)

VIJAYKUMAR N

Digitally signed by VIJAYKUMAR N
Date: 2026.06.03 18:10:44 +0530

**(ಶ್ರೀ. ವಿಜಯಕುಮಾರ. ಎನ್ )**

ಹೆಚ್ಚುವರಿ ದಿವಾಣಿ ನ್ಯಾಯಧೀಶರು ಹಾಗೂ

ಜೆ.ಎಂ.ಎಫ್.ಸಿ., ರೋಣ.